ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಕುಂಬಾರಿಕೆ ವೃತ್ತಿಗೆ ವಿಶೇಷ ಮನ್ನಣೆ ನೀಡುವುದು.

265 (490) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ):- ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಕುಂಬಾರಿಕೆ ವೃತ್ತಿಗೆ ವಿಶೇಷ ಮನ್ನಣೆಯನ್ನು ಸರ್ಕಾರ ನೀಡಿದೆಯೇ?

ಆ) ಸಾಲ ಸೌಲಭ್ಯ ಯೋಜನೆಗಳನ್ನು ಹೊರತುಪಡಿಸಿ ಕಸುಬನ್ನು ರಕ್ಷಿಸಲು ಆಧುನಿಕ ಸಾಧನ-ಸಲಕರಣೆ ಯಂತ್ರೋಪಕರಣ, ತರಬೇತಿ ಇತ್ಯಾದಿಗಳ ಅಳವಡಿಕೆ ಬಗ್ಗೆ ಮಾಹಿತಿ ನೀಡುವುದು?

ಇ) ಸುಧಾರಿತ ಮಾದರಿಯಲ್ಲಿ ಮಡಕೆ ಸಡಲು(ಸುಡಿಗೆ ಮನೆ) ಶೆಡ್ ನಿರ್ಮಿಸಿ ಅನುಕೂಲ ಕಲ್ಪಿಸಿದೆಯೇ?

ಈ) ಮಣ್ಣಿನ ಈ ಮಡಕೆಗಳನ್ನು ಸುಡಲು ಕಟ್ಟಿಗೆ (ಸೌದೆ) ಸುಲಭವಾಗಿ ಸಿಗುವ ವ್ಯವಸ್ಥೆ ಇದೆಯೇ?

ಉ) ಈ ಉರುವಲಿಗಾಗಿ ಕುಂಬಾರರು ಏನನ್ನು ಆಶ್ರಯಿಸಬೇಕಾಗಿದೆ. ಈ ದಿಕ್ಕಿನಲ್ಲಿ ಸರ್ಕಾರದ ನಿಲುವೇನು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ವತಿಯಿಂದ ಕುಂಬಾರಿಕೆ ಉದ್ದಿಮೆಗೆ ಸಂಬಂಧಿಸಿದಂತೆ ಖಾದಿ ಆಯೋಗದ ನಿಯಮಾನುಸಾರ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಆ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಕುಂಬಾರಿಕೆ ಉದ್ದಿಮೆದಾರರಿಗೆ ಸಾಲ ಸೌಲಭ್ಯಗಳನ್ನು ಹೊರತುಪಡಿಸಿ ಉದ್ದಿಮೆದಾರರು ತಯಾರಿಸಿದ ಉತ್ಪನ್ನಗಳನ್ನು ಮಂಡಲಿಯು ಕಾಲಕಾಲಕ್ಕೆ ನಡೆಸುವ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಿ ಮಾರಾಟ ಅಭಿವೃದ್ಧಿಗೆ ಸಹಕಾರ ನೀಡಲಾಗುತ್ತಿದೆ.

ಕಸುಬುದಾರರಿಗೆ ಕಸುಬನ್ನು ರಕ್ಷಿಸಲು ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ಖಾದಿ ಆಯೋಗದ ತರಬೇತಿ ಕೇಂದ್ರವಿದ್ದು ಅದರಿಂದ ಕಸುಬುದಾರರಿಗೆ ವಿವಿಧ ರೀತಿಯ ಕುಂಬಾರಿಕೆ ವಸ್ತುಗಳನ್ನು ತಯಾರಿಸಲು ತರಬೇತಿಯನ್ನು ನೀಡಲಾಗುತ್ತಿದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಉತ್ತಮ ಗುಣಮಟ್ಟದ ಕುಂಬಾರಿಕೆ ವಸ್ತುಗಳನ್ನು ತಯಾರಿಸುವಲ್ಲಿ ಬಿಜಾಪುರ ಜಿಲ್ಲೆಯ ಭಾರತೀಯ ಸ್ಮಾಲ್ ಅಂಡ್ ವಿಲೇಜ್ ಇಂದಿನಿಂದ ಈಸ್ಟ್ ಅಸೋಸಿಯೋಷನ್, ದೇವರ ಹಿಪ್ಪರಗಿ ಎಂಬ ಸಂಸ್ಥೆಯು ಮುಂದೆ ಬಂದಿದ್ದು, ಸದರಿ ಸಂಸ್ಥೆಯು ಒಂದು ಯೋಜನಾ ವರದಿಯನ್ನು ತಯಾರಿಸಿ ಕ್ಲಸ್ಟರ್ ಡೆವೆಲಪ್‌ಮೆಂಟ್ ಪ್ರೋಗ್ರಾಂ ಅಡಿಯಲ್ಲಿ ಅನುಷ್ಠಾನಗೊಳಿಸಲು ಖಾದಿ ಮಂಡಲಿಗೆ ಸಲ್ಲಿಸಿದ್ದು

ಸದರಿ ಯೋಜನಾ ವರದಿಯನ್ನು ಖಾದಿ ಆಯೋಗಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಯೋಜನೆಯು ಅನುಷ್ಠಾನದಲ್ಲಿ ದೇವರಹಿಪ್ಪರಗಿ ಗ್ರಾಮದ ಸುತ್ತಮುತ್ತಲ ಗ್ರಾಮದಲ್ಲಿ ಸುಮಾರು 300 ಕುಟುಂಬಗಳ 170 ಕುಶಲಕರ್ಮಿಗಳ ಉದ್ಯೋಗವಕಾಶವನ್ನು ಕಲ್ಪಿಸಿದಂತಾಗುತ್ತದೆ. ಹಾಗೂ ಅತ್ಯಾಧುನಿಕ ತಂತ್ರಜ್ಞಾನದದಡಿಯಲ್ಲಿ ವಸ್ತುಗಳನ್ನು ಉತ್ಪಾದನೆ ಮಾಡಲು ಸಹ ಪ್ರೋತ್ಸಾಹ ನೀಡಿದಂತಾಗುತ್ತದೆ.

ಇ) ಉದ್ದಿಮೆದಾರರು ಮಡಿಕೆ ಸುಡಲು ಶೆಡ್ ನಿರ್ಮಿಸಲು (ಸುಡುವ ಮನೆ) ಹಣಕಾಸು ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಈ) ಉದ್ದಿಮೆದಾರರು ಮಣ್ಣಿನ ಮಡಿಕೆಗಳನ್ನು ಸುಡಲು ಬೇಕಾದ ಕಟ್ಟಿಗೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬಹುದಾಗಿರುತ್ತದೆ. ಇದನ್ನು ಖರೀದಿಸುವ ಸಲುವಾಗಿ ದುಡಿಯುವ ಬಂಡವಾಳ ರೂಪದಲ್ಲಿ ಹಣಕಾಸಿನ ನೆರವನ್ನು ಒದಗಿಸಲಾಗುತ್ತಿದೆ.

ಉ) ಮೇಲಿನಂತೆ.

ಕರಾವಳಿ ಜಿಲ್ಲೆಯ ಎಡಿಬಿ ಯೋಜನೆ

266 (251) ಶ್ರೀ ಗೋಪಾಲ ಬಂಡಾರಿ .ಹೆಚ್.(ಕಾರ್ಕಳ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎ.ಡಿ.ಬಿ ಯೋಜನೆಯಲ್ಲಿ ಕರಾವಳಿ ಜಿಲ್ಲೆಯ ಕಾರ್ಕಳ, ಮೂಡಬಿದ್ರೆ, ಬಂಟ್ವಾಳ, ಮೂಲ್ಕೆ ಪುರಸಭೆಗಳನ್ನು ಸೇರಿಸದಿರಲು ಕಾರಣವೇನು?

ಆ) ಈ ಪುರಸಭೆಗಳನ್ನು ಹೆಚ್ಚುವರಿಯಾಗಿ ಸೇರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ(ವಿವರ ಒದಗಿಸುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಎ.ಡಿ.ಬಿ. ಯೋಜನೆಯಲ್ಲಿ ಈ ಕೆಳಕಂಡ ಅಂಶಗಳ ಆಧಾರದ ಮೇಲೆ ವಿವರವಾಗಿ ಅಧ್ಯಯನದ ನಂತರ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿ ಪಟ್ಟಣಗಳನ್ನು ಆರಿಸಲಾಯಿತು.

1) ನಗರ : ಪಟ್ಟಣದ ಜನ ಸಂಖ್ಯೆ

2) ಈಗಿರುವ ಮೂಲ ಭೂತ ಸೌಲಭ್ಯಗಳು

3) ನಗರ ಸಭೆ : ಪುರಸಭೆಯಲ್ಲಿ ಅಭಿವೃದ್ಧಿ ನಕಾಶೆಯ ಲಭ್ಯತೆ.

4) ನಗರ ಸಭೆ : ಪುರಸಭೆಯ ಸಾಲವನ್ನು ಹಿಂತಿರುಗಿಸುವ ಬಗ್ಗೆ (ಆರ್ಥಿಕ ಸ್ಥಿತಿ) ಮೇಲಿನ ಅಂಶಗಳ ಆಧಾರದ ಮೇಲೆ ಕೇವಲ 10 ಪಟ್ಟಣಗಳನ್ನು ಅಂತಿಮವಾಗಿ ತೆಗೆದುಕೊಳ್ಳಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ಆರ್ಥಿಕ ಉಳಿತಾಯದ ಮೇರೆಗೆ, ಪುರಸಭೆಗಳನ್ನು ಹೆಚ್ಚುವರಿಯಾಗಿ ಸೇರಿಸುವ ವಿಚಾರವನ್ನು ಯೋಜನೆಯ 3ನೇ ವರ್ಷದ ಅನುಷ್ಠಾನದ ನಂತರವೇ ಪರಿಗಣಿಸಬಹುದು.